ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು.**

ಸಂಖ್ಯೆ: ಸಿಎಸಿ-05/ಪ.ಪ್ರಾ.ಶಾ.ಶಿ.ನೇ.ಪ/ಘ.ಪ್ರ/31/2019-20 ದಿನಾಂಕ: 08-11-2019

## ಪ್ರಕಟಣೆ

2019-20ನೇ ಸಾಲಿನಲ್ಲಿ ರಾಜ್ಯದಲ್ಲಿನ ಒಟ್ಟು 10,565 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6 ರಿಂದ 8ನೇ ತರಗತಿ) ವೃಂದದ (ಗಣಿತ ಮತ್ತು ವಿಜ್ಞಾನ, ಆಂಗ್ಲ ಭಾಷೆ ಹಾಗೂ ಸಮಾಜ ಪಾಠಗಳು) ಖಾಲಿ ಹುದ್ದೆಗಳಿಗೆ (ಹೈದರಾಬಾದ್ ಕರ್ನಾಟಕ ಹಾಗೂ ಇತರೆ) ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ.94.ಪಿಬಿಎಸ್.2018, ದಿನಾಂಕ: 22-08-2018, 22-02-2019 ಮತ್ತು ತಿದ್ದುಪಡಿ ಮತ್ತು ಸೇರ್ಪಡೆ ಆದೇಶ ದಿನಾಂಕ: 25-02-2019ರಂತೆ ದಿನಾಂಕ: 25-05-2019 ಹಾಗೂ 26-05-2019 (ಪರೀಕ್ಷೆ-2) ಮತ್ತು ದಿನಾಂಕ: 01-06-2019 ಹಾಗೂ 02-06-2019ರಂದು (ಪರೀಕ್ಷೆ-1) ಎರಡು ಹಂತಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಯಿತು. ಈ ಪರೀಕ್ಷೆಗೆ ಹೈದರಾಬಾದ್ ಕರ್ನಾಟಕದ 11677 ಅಭ್ಯರ್ಥಿಗಳು ಹಾಗೂ ಇತರೆ ಜಿಲ್ಲೆಗಳ 40211 ಅಭ್ಯರ್ಥಿಗಳು ಒಟ್ಟು 51888 ಅಭ್ಯರ್ಥಿಗಳು ಪರೀಕ್ಷೆ ಬರೆದಿರುತ್ತಾರೆ.

ಎರಡು ಹಂತಗಳಲ್ಲಿ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಯು ವಿವರಣಾತ್ಮಕ ಹಾಗೂ ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿದೆ. ಮೇಲ್ಕಂಡ ಸರ್ಕಾರದ ಅಧಿಸೂಚನೆಯಂತೆ ಸದರಿ ಸಾಮಾನ್ಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪತ್ರಿಕೆ-2ರಲ್ಲಿ ಶೇ.50 ಹಾಗೂ ಪತ್ರಿಕೆ-3ರಲ್ಲಿ ಶೇ.60 ಅರ್ಹತಾ ಮಾನದಂಡವನ್ನು ನಿಗದಿಗೊಳಿಸಿದೆ.

ಪ್ರಕಟಿತ ಅಂಕಪಟ್ಟಿಗೆ ದಿನಾಂಕ: 09-09-2019ರಿಂದ 16-09-2019ರವರೆಗೆ ಸಿ.ಇ.ಟಿ ಅಂಕಗಳನ್ನು ಹೊರತುಪಡಿಸಿ, ಅಭ್ಯರ್ಥಿಗಳು ವೈಯಕ್ತಿಕ ಮಾಹಿತಿಗಳಿಗೆ ಅಂದರೆ, ಹೆಸರಿನಲ್ಲಿನ ಕಾಗುಣಿತ ದೋಷ (ಅಭ್ಯರ್ಥಿ, ತಾಯಿ, ತಂದೆ), ಜನ್ಮ ದಿನಾಂಕ, ಪದವಿ, ಬಿ.ಇಡಿ/ ಡಿ.ಇಡಿ/ ಟಿ.ಇ.ಟಿ ಅಂಕಗಳಲ್ಲಿ ಬದಲಾವಣೆಗೆ ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು ಇಲ್ಲಿ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು, ಅಂತೆಯೇ ಅಭ್ಯರ್ಥಿಗಳಿಂದ ಸ್ವೀಕರಿಸಲಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಸರಿಪಡಿಸಲಾಗಿದೆ.

ಮುಂದುವರೆದು, ಅರ್ಹ ಅಭ್ಯರ್ಥಿಗಳ ಪದವಿ ಬಿ.ಇಡಿ/ ಡಿ.ಇಡಿ, ಟಿ.ಇಟಿ ಹಾಗೂ ಸಿ.ಇ.ಟಿಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಆಧಾರದ ಮೇಲೆ ಲೆಕ್ಕಹಾಕಿ Weightage list ಅನ್ನು ದಿನಾಂಕ: 03-10-2019ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು.

ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಎಲ್ಲಾ ಅರ್ಹ ಅಭ್ಯರ್ಥಿಗಳ 1:2 ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ದಿನಾಂಕ: 08-11-2019 ರಂದು ಇಲಾಖಾ ವೆಬ್‌ಸೈಟಿನಲ್ಲಿ www.schooleducation.kar.nic.in ಪ್ರಕಟಿಸಲಾಗಿದೆ. **ಸದರಿ ಪಟ್ಟಿಯಲ್ಲಿ ಹೆಸರಿರುವ ಅರ್ಹ ಅಭ್ಯರ್ಥಿಗಳು ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ರವರ ಕಛೇರಿಯಲ್ಲಿ ನಡೆಸಲಾಗುವ ಮೂಲ ದಾಖಲೆಗಳ ಪರಿಶೀಲನೆಗೆ ಸೂಚಿತ ದಿನಾಂಕದೊಳಗಾಗಿ ನೇಮಕಾತಿಗೆ ಸಲ್ಲಿಸಿದ ಅರ್ಜಿಯಲ್ಲಿ ನಮೂದಿಸಿದ ಎಲ್ಲಾ ಮೂಲ ದಾಖಲೆಗಳೊಂದಿಗೆ ಹಾಜರಾಗತಕ್ಕದ್ದು.**

ಒಂದು ವೇಳೆ 1:2 ಪಟ್ಟಿಯಲ್ಲಿರುವ ಯಾವುದಾದರು ಅಭ್ಯರ್ಥಿಯು ಸಂಬಂಧಪಟ್ಟ ಮೂಲ ದಾಖಲೆಗಳನ್ನು ನಿಗದಿತ ದಿನಾಂಕದೊಳಗೆ ಒದಗಿಸಲು ವಿಫಲವಾದಲ್ಲಿ ಅಥವಾ ಅನರ್ಹರೆಂದು ಕಂಡುಬಂದಲ್ಲಿ ಅಥವಾ ನಿಗದಿತ ದಿನಾಂಕದೊಳಗಾಗಿ ಮೂಲ ದಾಖಲೆಗಳ ಪರಿಶೀಲನೆಗೆ ಗೈರುಹಾಜರಾದಲ್ಲಿ ಅಥವಾ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಪ್ರಮಾಣ ಪತ್ರಗಳನ್ನು ಪಡೆಯದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಹೆಸರನ್ನು 1:2 ತಾತ್ಕಾಲಿಕ ಪರಿಶೀಲನಾ ಪಟ್ಟಿಯಿಂದ ಕೈಬಿಡಲಾಗುವುದು.

**ವಿ.ಸೂ: 1:2 ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಜಿಲ್ಲೆ ಹಾಗೂ ಎರಡು ವಿಷಯದ ಹುದ್ದೆಗಳಿಗೆ ಅರ್ಹರಾಗಿರುವ ಅಭ್ಯರ್ಥಿಗಳು ತಮ್ಮ ಆದ್ಯತೆಯನ್ನು ರೂ. 50.00 ಗಳ ಮುಖಬೆಲೆಯ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರದ ಮೂಲಕ ಒಪ್ಪಿಗೆಯನ್ನು ಪರಿಶೀಲನೆಗೆ ಹಾಜರಾದ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ಇವರಿಗೆ ನೀಡತಕ್ಕದ್ದು. ಈ ರೀತಿ ಮುಚ್ಚಳಿಕೆ ನೀಡಿದ ವಿಷಯದ ಹುದ್ದೆ ಅಥವಾ ಜಿಲ್ಲೆಗೆ ಮಾತ್ರ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು. ನಂತರ ಬದಲಾವಣೆಗೆ ಯಾವುದೇ ಅವಕಾಶವಿರುವುದಿಲ್ಲ.**

8/11/2019

ವಿಶೇಷಾಧಿಕಾರಿ